ರಾಜ್ಯದಲ್ಲಿ ಸಮಗ್ರ ಶಿಕ್ಷಣ ಮಸೂದೆ.

1791 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಮಗ್ರ ಶಿಕ್ಷಣ ಮಸೂದೆ ಎಂದಿನಿಂದ ಜಾರಿಗೆ ಬಂದಿದೆ?

ಆ) ಹಾಗಿದ್ದಲ್ಲಿ ಇದಕ್ಕೆ ನಿಯಮಾವಳಿಗಳನ್ನು ರೂಪಿಸಲಾಗಿದೆಯೇ?

ಇ) ಹಾಗಿದ್ದಲ್ಲಿ ಇದರ ರೂಪ ರೇಶೆಗಳೇನು?

ಈ) ಈ ಮಸೂದೆಯನ್ನು ಎಂದಿನಿಂದ ಕಾರ್ಯಚರಣೆಗೆ ತರಲಾಗಿದೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1.6.1995ರಿಂದ ಜಾರಿಗೆ ಬಂದಿದೆ.

ಆ) ಮತ್ತು ಇ) ಪ್ರಸ್ತುತ ಮಸೂದೆಯಡಿಯಲ್ಲಿ ಹಲವು ನಿಯಮಾವಳಿಗಳನ್ನು ರೂಪಿಸಬೇಕಾಗಿದ್ದು, ಕೆಲವು ನಿಯಾವಳಿಗಳನ್ನು ಈಗಾಗಲೇ ರೂಪಿಸಲಾಗಿದೆ.

ಈ) 1.6.1995ರಿಂದ ಕಾರ್ಯಚರಣೆಗೆ ಬಂದಿದೆ.

ರಾಜ್ಯದಲ್ಲಿನ ಖಾಸಗಿ ನರ್ಸಿಂಗ್ ಹೋಂಗಳ ಬಗ್ಗೆ

1792 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಖಾಸಗಿ ನರ್ಸಿಂಗ್ ಹೋಂಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು)

2. ಇಂತಹ ಖಾಸಗಿ ನರ್ಸಿಂಗ್ ಹೋಂಗಳಲ್ಲಿ ಶುಶ್ರೂಷ ಚಿಕಿತ್ಸೆಗೆ ರೋಗಿಗಳಿಂದ ಹಣ ವಸೂಲಿ ಮಾಡಲು ಮಾರ್ಗಸೂಚಿಗಳಿವೆಯೇ?

3. ಇಲ್ಲದೇ ಇದ್ದ ಪಕ್ಷದಲ್ಲಿ ಬಡ ರೋಗಿಗಳ ಹಿತದೃಷ್ಟಿಯಿಂದ ಖಾಸಗಿ ನರ್ಸಿಂಗ್ ಹೋಂ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ?

ಡಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

1. ಒಟ್ಟು ಸಂಖ್ಯೆ : 1714
   (ಜಿಲ್ಲಾವಾರು ಪಟ್ಟಿ ಲಗತ್ತಿಸಲಾಗಿದೆ)
2. ಇಲ್ಲ.
3. ಹೌದು. ಪರಿಶೀಲನೆಯಲ್ಲಿದೆ.

ವಿಧಾನಸಭಾ ಸದಸ್ಯರಾದ ಶ್ರೀ ಕೆ. ಜಯರಾಮಶೆಟ್ಟಿ (ಉಳ್ಳಾಲ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2691ಕ್ಕೆ ಉತ್ತರ

ಖಾಸಗಿ ನರ್ಸಿಂಗ್ ಹೋಂಗಳ ಜಿಲ್ಲಾವಾರು ಸಂಖ್ಯೆ

1.	ಬೆಂಗಳೂರು (ಉತ್ತರ ಮತ್ತು ದಕ್ಷಿಣ)	188
2.	ಬೆಂಗಳೂರು (ಗ್ರಾಮಾಂತರ)	42
3.	ಬೆಳಗಾಂ	204
4.	ಬಳ್ಳಾರಿ	67
5.	ಬೀದರ್	54
6.	ಬಿಜಾಪುರ	88
7.	ಚಿಕ್ಕಮಗಳೂರು	35
8.	ಚಿತ್ರದುರ್ಗ	74
9.	ದಕ್ಷಿಣ ಕನ್ನಡ	139
10.	ಧಾರವಾಡ	214
11.	ಗುಲ್ಬರ್ಗಾ	86
12.	ಹಾಸನ	43
13.	ಕೊಡಗು	18
14.	ಕೋಲಾರ	68
15.	ಮಂಡ್ಯ	41
16.	ಮೈಸೂರು	89
17.	ರಾಯಚೂರು	49
18.	ಶಿವಮೊಗ್ಗ	67
19.	ತುಮಕೂರು	86
20.	ಉತ್ತರ ಕನ್ನಡ	62
		1714